# ದ್ವಂದ್ವಗಳ ನಾವೆಯಲ್ಲಿ ಜೆಹಾದ್ ಕಾದಂಬರಿ ನಾಯಕ
# ಹೊಸ ಹೊಳಹು ಕಾಣಿಸಿದ 'ರಷೀದ'



**ದೀಪಾ ಹಿರೇಗುತ್ತಿ**

ಕಲೆ: ಸಂತೋಷ್ ಸಸಿಹಿತ್ಲು

'ಜೆಹಾದ್' ನನ್ನ ಪದವಿ ತರಗತಿಯ ಪಠ್ಯವಾಗಿದ್ದ ಕಾದಂಬರಿ. ಬೊಳುವಾರು ಮಹಮ್ಮದ್ ಕುಂಞಿ ಅವರ ಈ ಕೃತಿ ನನ್ನ ಮೇಲೆ ಮಾಡಿದ ಪರಿಣಾಮ ತೀವ್ರವಾದದ್ದು. ಎರಡು ದಶಕಗಳಿಗಿಂತಲೂ ಹಿಂದೆ ಓದಿದ ಈ ಕಾದಂಬರಿ ವಿದ್ಯಾರ್ಥಿನಿಯಾಗಿದ್ದ ನನ್ನಲ್ಲಿ ಹಲವಾರು ಪ್ರಶ್ನೆಗಳನ್ನು ಹುಟ್ಟುಹಾಕಿತ್ತು ಜತೆಗೆ ಹಲವಾರು ಪ್ರಶ್ನೆಗಳಿಗೆ ಉತ್ತರಗಳನ್ನೂ ಒದಗಿಸಿತ್ತು. ವಿದ್ಯಾರ್ಥಿ ಜೀವನದಲ್ಲಿ ಓದನ್ನು ಗಂಭೀರವಾಗಿ ಯೋಚಿಸುವಂತೆ ಮಾಡಿದ ಪ್ರಮುಖ ಕೃತಿಗಳಲ್ಲಿ ಒಂದು 'ಜೆಹಾದ್'. ಅದರ ನಾಯಕ ರಷೀದನ ಪಾತ್ರವನ್ನು ಹೇಗೆ ಮರೆಯಲಿ?

ಜೆಹಾದ್ ಅಥವಾ ಜಿಹಾದ್ ಎಂಬುದು ಬೇರೆಯೇ ಅರ್ಥ ಪಡೆದುಕೊಂಡು ದ್ವೇಷವನ್ನು ಹಬ್ಬಿಸಲು ಉಪಯೋಗವಾಗುತ್ತಿರುವ ಹೊತ್ತಿದು. ಆದರೆ, ಹತ್ತಿರ ಹತ್ತಿರ ಕಾಲು ಶತಮಾನದ ಹಿಂದೆ ನಾನು ಈ ಕಾದಂಬರಿ ಓದಲು ಕೈಗೆತ್ತಿಕೊಂಡಾಗ ನನಗದು ಅಪರಿಚಿತ ಪದವೇ. ಇಂದು ಧರ್ಮ ಧರ್ಮಗಳ ನಡುವಿನ ಯುದ್ಧ ಬಹುಚರ್ಚಿತ ಸೂಕ್ಷ್ಮ ವಿಷಯವಾಗಿರುವಾಗಲೇ ಅದು ಬಾಹ್ಯ ಜಗತ್ತಿಗಿಂತ ಆಂತರಿಕ ಜಗತ್ತಿಗೇ ಜಾಸ್ತಿ ಸಂಬಂಧಪಟ್ಟದ್ದು ಎಂದು ಮನೋಜ್ಞವಾಗಿ ನಿರೂಪಿಸಿದವರು ಬೊಳುವಾರು. ಕಾದಂಬರಿಯ ನಾಯಕ ರಷೀದನ ತಳಮಳ, ಗೊಂದಲ ನನ್ನವೇ ಆಗಿ ಅವನಲ್ಲಿ ಮೊಳೆಯುವ ಪ್ರಶ್ನೆಗಳು ನನ್ನಲ್ಲೂ ಚಿಗುರಿ ಕಾದಂಬರಿಯುದ್ದಕ್ಕೂ ನಡೆವ ರಷೀದನ ಈ ಪಯಣ ನನ್ನದೂ ಆಗಿತ್ತು. ಹಾಗಾಗಿ ರಷೀದನ ಪಾತ್ರವನ್ನು ಪಕ್ಕನೇ ಮರೆತುಬಿಡುವುದು ಸಾಧ್ಯವಿಲ್ಲ.

ನಾನು ಅಲ್ಲಿಯವರೆಗೂ ಓದಿದ ಎಲ್ಲ ಕಾದಂಬರಿಗಳ ನಾಯಕ ನಾಯಕಿಯರೂ ನನ್ನದೇ ಧರ್ಮದವರಾಗಿದ್ದರಿಂದ ಮೊದಲ ಬಾರಿ ಮತ್ತೊಂದು ಧರ್ಮದ ವ್ಯಕ್ತಿಗಳು ಮುಖ್ಯ ಪಾತ್ರಗಳಾಗಿರುವ ಕಾದಂಬರಿ ಓದಿದ್ದು ಹೊಸ ಅನುಭವ. ಹೊಸ ಪಾತ್ರವೊಂದನ್ನು ಓದಿಕೊಂಡಾಗ ಅನ್ನಿಸಿದ ಭಾವನೆಯೂ ವಿಭಿನ್ನ. ಧರ್ಮದ ಬಟ್ಟೆಯೊಳಗಿನ ಮನುಷ್ಯಜೀವಗಳೆಲ್ಲ ಒಂದೇ, ಅವುಗಳ ಸಂಕಟ, ಅಳು, ನಗು ಎಲ್ಲ ಒಂದೇ ಎಂಬುದನ್ನು ಅರ್ಥಮಾಡಿಸಿದವನು ರಷೀದ. ನನಗೆ ಹೊಸ ದೃಷ್ಟಿಕೋನದ ಹೊಳಹು ಹೊಳೆಸಿದ ಸ್ನೇಹಿತನಂತೆ ಕಾಣುತ್ತಾನೆ. ಈ ರೀತಿ ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆಯ ಪರಿಚಯ ವಿಶಿಷ್ಟ ಎನಿಸಿತ್ತು. ರಷೀದನ ಸಿಟ್ಟು, ಅವನ ರೆಬೆಲ್ ಮನೋಭಾವ ಹದಿಹರೆಯದ ನನಗೆ ನನ್ನಂತಹ ವಿದ್ಯಾರ್ಥಿಯೇ ಈತ ಎನಿಸಿ ಮತ್ತಷ್ಟು ಹತ್ತಿರವೆನಿಸಿದ. ಹಿರಿಯರು ಹೇಳಿದ್ದನ್ನು ಚಾಚೂ ತಪ್ಪದೇ ಪಾಲಿಸುವ ಕಾಸಿಮ್ ಮತ್ತು ಪ್ರಶ್ನಿಸುವ ರಷೀದರಲ್ಲಿ ನಾನು ಸಹಜವಾಗಿಯೇ ರಷೀದನ ಪರವಾಗಿದ್ದೆ.

ನನಗೋ ಇತರ ಧರ್ಮದ ಈ ಮುಖ್ಯ ಪಾತ್ರ ಹೊಸದೆನಿಸಿತು ಎಂದು ಒಪ್ಪಿಕೊಳ್ಳೋಣ. ಹಾಗಾದರೆ ಯಾವಾಗಲೂ ಪರಧರ್ಮದವರೇ ಮುಖ್ಯಪಾತ್ರದಲ್ಲಿರುವ ಮತ್ತು ತಮ್ಮ ಧರ್ಮದವರು